ಸರಪಳಿ 11.00 ನಿಂದ 16.00 ಕಿ.ಮೀ ವರೆಗಿನ ಕಾಮಗಾರಿಗಳ ಅಂದಾಜು ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ. ಸರಪಳಿ 11.00 ಕಿ.ಮೀ ನಿಂದ 16.00 ಕಿ.ಮೀ.ನ ಕಾಮಗಾರಿಗಳನ್ನು ಮಾರ್ಚ್ 2011ರಲ್ಲಿ ಪೂರ್ಣಗೊಳಿಸಿ. ಜೂನ್ 2011 ರಲ್ಲಿ ರೈತರ ಜಮೀನುಗಳಿಗೆ ನೀರೊದಗಿಸಲು ಯೋಜಿಸಿದೆ.

ಇ ಈ ಕಾಮಗಾರಿಗಳಿಗೆ ಇಲ್ಲಿಯವರೆಗೆ ರೂ.360.18 ಲಕ್ಷ ವೆಚ್ಚವಾಗಿದ್ದು, 2010–11ನೇ ಸಾಲಿನಲ್ಲಿ ರೂ.131.00 ಲಕ್ಷ ಅನುದಾನ ನೀಡಿದ್ದು, ಮಾರ್ಚ್ 2011ರಲ್ಲಿ 0.00–16.00 ಕಿ.ಮೀ ವರೆಗಿನ ಎಲ್ಲಾ ಮಣ್ಣು ಅಗೆತ ಮತ್ತು ಅಡ್ಡಮೋರಿ ಕಾಮಗಾರಿಗಳನ್ನು (ಲೈನಿಂಗ್ ಕಾಮಗಾರಿ ಹೊರತುಪಡಿಸಿ) ಪೂರ್ಣಗೊಳಿಸಲು ಯೋಜಿಸಿದೆ.

ಸಂಧ್ಯಾ ಸುರಕ್ಷಾ ಯೋಜನೆ

676(466) ಶ್ರೀ ಡಾ॥ ಪರಮೇಶ್ವರ ಜಿ:(ಕೊರಟಗೆರೆ) ಮಾನ್ಯ ವಿಧಾನ ಸಭೆ ಸದಸ್ಯರು ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಧ್ಯಾ ಸುರಕ್ಷಾ ಯೋಜನೆ ಕಾರ್ಯಕ್ರಮದಡಿ ರಾಜ್ಯದಲ್ಲಿ ಇದುವರೆವಿಗೂ ಎಷ್ಟು ಜನರಿಗೆ ಹಣ ಮಂಜೂರಾಗಿದೆ, ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆಯಾಗುತ್ತಿದೆಯೇ?

ಶ್ರೀ ಜಿ ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಆ) ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಒಂದಾದ ಸಂಧ್ಯಾ ಸುರಕ್ಷಾ ಯೋಜನೆಯಡಿ ರಾಜ್ಯದಲ್ಲಿ ಮೇ 2010 ರಂತೆ 11,65,386 ಫಲಾನುಭವಿಗಳಿದ್ದು, ಸದರಿ ಫಲಾನುಭವಿಗಳಿಗೆ ರಾಜ್ಯದ ಎಲ್ಲಾ ಜಿಲ್ಲಾ ಖಜಾನೆಗಳಿಂದ ಮೇ 2010 ರ ಅಂತ್ಯದವರೆಗೆ ಮಾಸಾಶನವನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ.143.78 ಕೋಟಿಗಳಷ್ಟು ಸಂಧ್ಯಾ ಸುರಕ್ಷಾ ಯೋಜನೆಯ ಮಾಸಾಶನವನ್ನು ವಿತರಿಸಲು ಖರ್ಚಾಗಿರುತ್ತದೆ.

ಅನುಬಂಧ

ಕ್ರ.ಸಂ	ಖಜಾನೆ ಹೆಸರು	ಯಾವ ಮಾಹೆಯವರೆಗೆ ರವಾನಿಸಲಾಗಿದೆ.
		ಸಂಧ್ಯಾ ಸುರಕ್ಷಾ
1	ಬೆಂಗಳೂರು ನಗರ	ಮೇ–2010
2	ಬೆಂಗಳೂರು ಗ್ರಾಮಾಂತರ	ಮೇ–2010
3	ಬೆಳಗಾಂ	ಮೇ–2010
4	ಬಳ್ಳಾರಿ	ಮೇ–2010
5	ಬೀದರ್	ಮೇ–2010
6	ಬಿಜಾಪುರ	ಮೇ–2010
7	ಬಾಗಲಕೋಟೆ	ಮೇ–2010
8	ಚಿಕ್ಕಮಗಳೂರು	ಮೇ–2010
9	ಚಿತ್ರದುರ್ಗ	ಮೇ–2010
10	ಚಾಮರಾಜನಗರ	ಏಪ್ರಿಲ್–2010
11	ಚಿಕ್ಕಬಳ್ಳಾಪುರ	ಮೇ–2010
12	ದಕ್ಷಿಣ ಕನ್ನಡ	ಮೇ–2010
13	ಧಾರವಾಡ	ಮೇ–2010
14	ದಾವಣಗೆರೆ	ಮೇ–2010
15	ಗುಲ್ಬರ್ಗಾ	ಮೇ–2010
16	ಗದಗ	ಮೇ–2010
17	ಹಾಸನ	ಮೇ–2010
18	ಹಾವೇರಿ	ಮೇ–2010
19	ಕೊಡಗು	ಮೇ–2010
20	ಕೋಲಾರ	ಮೇ–2010
21	ಕೊಪ್ಪಳ	ಮೇ–2010
22	ಮಂಡ್ಯ	ಮೇ–2010

23	ಮೈಸೂರು	ಏಪ್ರಿಲ್–2010
24	ರಾಯಚೂರು	ಮೇ–2010
25	ರಾಮನಗರ	ಮೇ–2010
26	ಶಿವಮೊಗ್ಗ	ಮೇ–2010
27	ತುಮಕೂರು	ಮೇ–2010
28	ಉತ್ತರ ಕನ್ನಡ	ಮೇ–2010
29	ಉಡುಪಿ	ಮೇ–2010
30	ಯಾದಗಿರಿ	ಮೇ–2010

ತುಮಕೂರು ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆ

677(467) ಡಾ: ಪರಮೇಶ್ವರ ಜಿ:(ಕೊರಟಗೆರೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ರೈತರ ಜಮೀನನ್ನು ಸರ್ಕಾರ ವಶಪಡಿಸಿಕೊಂಡಿದೆ?

ಅ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಕೈಗಾರಿಕೆಗಳು ಸ್ಥಾಪಿತವಾಗಿವೆ ಹಾಗೂ ಜಿಲ್ಲೆಯಲ್ಲಿ ಹೂಡಿಕೆಯಾಗಿರುವ ಹಣ ಎಷ್ಟು?

ಇ) ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಸರ್ಕಾರದ ಮುಂದಿನ ಯೋಜನೆಗಳೇನು (ವಿವರ ನೀಡುವುದು).

ಶ್ರೀ ಮುರುಗೇಶ್ ಆರ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಸಿಕೊಳ್ಳಲಾದ ಜಮೀನಿನ ವಿವರ ಈ ಕೆಳಕಂಡಂತಿರುತ್ತದೆ.